

# ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ

**ಮಧುಮೇಹದಿಂದ ಉಂಟಾಗುವ ಗ್ಯಾಂಗ್ರೀನ್ ಸೇರಿದಂತೆ ಗಂಭೀರ ಸ್ವರೂಪದ ಗಾಯಗಳನ್ನು ಬೇಗನೆ ಗುಣಪಡಿಸಲು 'ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ' ವರದಾನ. ಅಮೆರಿಕ ತಂತ್ರಜ್ಞಾನದ ಈ ಥೆರಪಿ ಬೆಂಗಳೂರು, ಚೆನ್ನೈಗಳಲ್ಲಿ ಲಭ್ಯವಿದೆ.**

■ **ಉಮಾ ಅನಂತ್**

ಮಧುಮೇಹಿಗಳಲ್ಲಿ ಸಾಧಾರಣ ಮತ್ತು ತೀವ್ರ ಸ್ವರೂಪದ ಗಾಯಗಳಾದರೆ ಅದು ಬೇಗನೆ ಗುಣವಾಗುವುದಿಲ್ಲ. ದೇಹದಲ್ಲಿ ಸಕ್ಕರೆಯ ಪ್ರಮಾಣ ಏರುಪೇರು ಆಗುವುದರಿಂದ ಗಾಯ ಗುಣವಾಗಲು ಚಿಕಿತ್ಸೆ ನೀಡಿದರೂ ಅದು ಅಧಿಕ ಸಮಯ ತೆಗೆದುಕೊಳ್ಳುತ್ತದೆ. ಇಂಥ ಗಾಯಗಳಿಗೆ ಸೋಂಕು ತಗುಲದೆ ಗುಣಪಡಿಸಲು ಇದೀಗ 'ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ' ಎಂಬ ಅತ್ಯಾಧುನಿಕ ಚಿಕಿತ್ಸೆ ಇದೆ.

ಬದಲಾದ ಜೀವನಶೈಲಿ, ವೇಗದ ಬದುಕು, ವ್ಯಾಯಾಮದ ಕೊರತೆ, ನಡಿಗೆಯ ಕಡೆಗೆ ಗಮನಕೊಡಲೂ ಆಗದಷ್ಟು ಕೆಲಸದ ಒತ್ತಡ... ಇವೇ ಮುಂತಾದ ಕಾರಣಗಳಿಂದಾಗಿ ಇಂದು ನಮ್ಮ ಆರೋಗ್ಯ ಹದಗೆಡುತ್ತಿದೆ. ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ, ಉಸಿರಾಟದ ಸಮಸ್ಯೆ ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಗಳು ಚಿಕ್ಕವಯಸ್ಸಿನಲ್ಲೇ ಆವರಿಸಿಕೊಂಡುಬಿಡುತ್ತಿವೆ. ಇದರಿಂದಾಗಿ ಉಂಟಾಗುವ ದೈಹಿಕ ಗಾಯಗಳನ್ನು ಎದುರಿಸುವುದು ಹಾಗೂ ಬೇಗನೆ ಗುಣಪಡಿಸುವುದು ಇಂದಿನ ದಿನಗಳಲ್ಲಿ ದೊಡ್ಡ ಸವಾಲಾಗಿ ಪರಿಣಮಿಸುತ್ತಿವೆ.

'ಮಧುಮೇಹವನ್ನು 'ಸೈಲೆಂಟ್ ಕಿಲ್ಲರ್' ಎಂದು ಹೇಳುವುದಿದೆ. ದೇಹದ ಒಳಭಾಗವನ್ನು, ಅಂಗಾಂಗಗಳ ಮೇಲೆ ಇಂಚು ಇಂಚಾಗಿ ಹೊಂಚು ಹಾಕಿ ಹಾನಿ ಮಾಡುವ ಈ ಕಾಯಿಲೆ ಇಂದಿನ ದಿನಗಳಲ್ಲಿ ಅತಿ ಹೆಚ್ಚು ಜನರನ್ನು ತನ್ನ ತೆಕ್ಕೆಗೆ ಎಳೆದುಕೊಳ್ಳುತ್ತಿದೆ. ಮಧುಮೇಹ ಇದ್ದವರ ಕಾಲಿಗೆ, ಕೈಗೆ ಗಾಯಗಳಾದರೆ ಅದು ಬೇಗ ಮಾಯುವುದಿಲ್ಲ. ಈ ಗಾಯಗಳಲ್ಲಿ ಎರಡು ವಿಧ. ಸಾಮಾನ್ಯ (ಅಕ್ಯೂಟ್) ಗಾಯ ಹಾಗೂ ಗಂಭೀರ (ಕ್ರೋನಿಕ್) ಗಾಯ. ಸಾಮಾನ್ಯ ಗಾಯ ಎಡವಿ ಬಿದ್ದಾಗ, ಉಗುರು ಕತ್ತರಿಸುವಾಗ ಆಗುವ ಗಾಯ, ಸುಟ್ಟ ಗಾಯಗಳು, ಕತ್ತರಿ, ಚಾಕು ಮುಂತಾದ ದಿನಬಳಕೆಯ ವಸ್ತುಗಳಿಂದಾಗುವ ಅಚಾನಕ್ ಗಾಯಗಳು. ಇಂತಹ ಸಾಮಾನ್ಯ ಗಾಯಗಳಿಗೆ ಚಿಕಿತ್ಸೆ ಸುಲಭ. ಗುಳಿಗೆಗಳು, ಲೇಪಗಳು, ಮುಲಾಮುಗಳಿಂದಲೂ ಸೋಂಕು